**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಹಣಮಂತ ಆರ್. ನಿರಾಣಿರವರು ನಿಯಮ 72ರ ಅಡಿಯಲ್ಲಿ ಕೇಳಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

**ಸೂಚನೆ:**

ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಯನ್ನೊಳಗೊಂಡಂತೆ ಕೃಷ್ಣ ಮೇಲ್ದಂಡೆ ಯೋಜನೆಯಡಿಯಲ್ಲಿ ನಿರ್ಮಿಸಿದ ಆಲಮಟ್ಟಿ ಜಲಾಶಯ ಹತ್ತಿರ ಹಾಗೂ ಜಲಾಶಯದ ಹಿನ್ನೀರಿನಿಂದ ಮುಳುಗಡೆಯಾಗುವ ನಡುಗಡ್ಡೆ (ಐಲ್ಯಾಂಡ್) ಪ್ರದೇಶದಲ್ಲಿ ಮತ್ತು ಸಮಾಜ ಸುಧಾರಕ, ಮಹಾ ಮಾನವತಾವಾದಿ ಅಣ್ಣಾ ಬಸವಣ್ಣನವರ ದೇವಸ್ಥಾನ ಹಾಗೂ ಬಾದಾಮಿ ತಾಲ್ಲೂಕಿನ ಅನೇಕ ಐತಿಹಾಸಿಕ ದೇವಾಲಯಗಳ ಹತ್ತಿರ ಪ್ರವಾಸಿ ತಾಣ ನಿರ್ಮಾಣದ ಕುರಿತು ಮತ್ತು ಅಲ್ಲಿರುವ ಪ್ರವಾಸಿ ತಾಣಗಳನ್ನು ಅಭಿವೃದ್ಧಿ ಪಡಿಸಲು ಇರುವ ಅವಕಾಶಗಳ ಕುರಿತು ಮಾನ್ಯ ಪ್ರವಾಸೋದ್ಯಮ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:**

ಪ್ರವಾಸೋದ್ಯಮ ನೀತಿ 2020-26ರನ್ವಯ ಬಾಗಲಕೋಟೆ ಜಿಲ್ಲೆಯ ಐಹೊಳೆ, ಬಾದಾಮಿ, ಪಟ್ಟದಕಲ್ಲು, ಕೂಡಲ ಸಂಗಮಗಳನ್ನು ಹಾಗೂ ವಿಜಯಪುರ ಜಿಲ್ಲೆಯನ್ನು ಆದ್ಯತಾ ಪ್ರವಾಸಿ ತಾಣಗಳೆಂದು ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ ಮತ್ತು ವಿಜಯಪುರ ಜಿಲ್ಲೆಯಲ್ಲಿ ಈ ಕೆಳಕಂಡ ಪ್ರವಾಸಿ ಸ್ಥಳಗಳನ್ನು ಪ್ರವಾಸಿ ತಾಣಗಳೆಂದು ಗುರುತಿಸಲಾಗಿದೆ.

| ಜಿಲ್ಲೆ | ತಾಲ್ಲೂಕು | 2020-25 ಪ್ರವಾಸೋದ್ಯಮ ನೀತಿಯನ್ವಯ ಗುರುತಿಸಿರುವ ಪ್ರವಾಸಿತಾಣಗಳು | ತಾಣಗಳ ಸಂಖ್ಯೆ |
|---|---|---|---|
| ಬಾಗಲಕೋಟೆ | ಬಾಗಲಕೋಟೆ | ಮುಚಕಂಡಿಕೆರೆ, ಸಿಮಿಕೇರಿ-ಲಡ್ಡುಮುತ್ತ್ಯಾ | 2 |
| | ಹುನಗುಂದ | ಐಹೊಳೆ, ಕೂಡಲಸಂಗಮ | 2 |
| | ಬಾದಾಮಿ | ಬಾದಾಮಿ, ಪಟ್ಟದಕಲ್ಲು, ಮಹಾಕೂಟ | 3 |
| | ಬೀಳಗಿ | ಚಿಕ್ಕಸಂಗಮ | 1 |
| | ಜಮಖಂಡಿ | ಕಟ್ಟಿಕೆರೆ | 1 |
| ವಿಜಯಪುರ | ವಿಜಯಪುರ | ಗೋಲಗುಂಬಜ ಮತ್ತು ಇಬ್ರಾಹಿಂ ರೋಜಾ, ತೊರವಿ, ಕನಮಡಿ, ಜಾಲಗೇರಿ ಮುಮ್ಮಟ್ಟಿಗುಡ್ಡ, ದ್ಯಾಬೇರಿ, ಕುಮಟಗಿ, ಉಪ್ಪಲದಿನ್ನಿ, ಹರಳಯ್ಯನ ಗುಂಡ, ಶೇಗುಣಶಿ, ತಿಕೋಟ. | 11 |
| | ಬಸವನಬಾಗೇವಾಡಿ | ಬಸವನಬಾಗೇವಾಡಿ, ಆಲಮಟ್ಟಿ ಆಣೆಕಟ್ಟು ಇಂಗಳೇಶ್ವರ | 3 |
| | ಮುದ್ದೇಬಿಹಾಳ | ಯಲಗೂರು, ತಂಗಡಗಿ, ಕೋಳೂರು. | 3 |
| | ಇಂಡಿ | ಹೊರ್ತಿ, ಹೀರೆರೂಗಿ, ಸಾಲೋಟಗಿ, ಹಲಸಂಗಿ. | 4 |
| | ಸಿಂದಗಿ | ಯಂಕಂಚಿ, ದೇವರಹಿಪ್ಪರಗಿ, ಚಟ್ಟರಕಿ, ಕಡ್ಲೆವಾಡ. | 4 |

ಪ್ರವಾಸೋದ್ಯಮ ಅಭಿವೃದ್ಧಿ ದೃಷ್ಟಿಯಿಂದ ಸದರಿ ಆದ್ಯತಾ ಪ್ರವಾಸಿ ತಾಣಗಳಲ್ಲಿ ಬಂಡವಾಳ ಹೂಡಲು ಮುಂದೆ ಬರುವ ಖಾಸಗಿ ಹೂಡಿಕೆದಾರರಿಗೆ ಸಹಾಯಧನ, ರಿಯಾಯಿತಿ ಮತ್ತು ಉತ್ತೇಜನಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿದೆ.

ಬಾಗಲಕೋಟೆ ಹಾಗೂ ವಿಜಯಪುರ ಜಿಲ್ಲೆಯ ಬಹುತೇಕ ಪ್ರವಾಸಿತಾಣಗಳು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ವ್ಯಾಪ್ತಿಗೆ ಒಳಪಡುತ್ತದೆ. ಸದರಿ ಐತಿಹಾಸಿಕ ಸ್ಥಳಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಪುರಾತತ್ವ ಇಲಾಖೆಯ ಅನುಮತಿ ದೊರಕುವುದು ಕಷ್ಟಸಾಧ್ಯವಾಗಿರುತ್ತದೆ.

ಬಾಗಲಕೋಟೆ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಸಂಬಂಧ ಬಂಡವಾಳ ವೆಚ್ಚಗಳು ಹಾಗೂ ಕೆ.ಟಿ.ವಿ.ಜಿ ಲೆಕ್ಕಶೀರ್ಷಿಕೆಗಳಡಿ ಕಳೆದ 5 ವರ್ಷಗಳಲ್ಲಿ ಇಲಾಖೆಯಿಂದ ರೂ.7433.75 ಲಕ್ಷಗಳ ಅಂದಾಜು ವೆಚ್ಚದಲ್ಲಿ 17 ಕಾಮಗಾರಿಗಳನ್ನು ಕೈಗೊಂಡಿದ್ದು, ರೂ.3318.75 ಲಕ್ಷಗಳ ಅನುದಾನವನ್ನು ಸಂಬಂಧಪಟ್ಟ ಅನುಷ್ಠಾನ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿದೆ ಮತ್ತು ವಿಜಯಪುರ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಸಂಬಂಧ ಬಂಡವಾಳ ವೆಚ್ಚಗಳು ಹಾಗೂ ಕೆ.ಟಿ.ವಿ.ಜಿ ಲೆಕ್ಕಶೀರ್ಷಿಕೆ ಅಡಿ ಕಳೆದ 5 ವರ್ಷಗಳಲ್ಲಿ ಇಲಾಖೆಯಿಂದ ರೂ.4968.82 ಲಕ್ಷಗಳ ಅಂದಾಜು ವೆಚ್ಚದಲ್ಲಿ 21 ಕಾಮಗಾರಿಗಳನ್ನು ಕೈಗೊಂಡಿದ್ದು, ರೂ.1676.19 ಲಕ್ಷಗಳ ಅನುದಾನವನ್ನು ಸಂಬಂಧಪಟ್ಟ ಅನುಷ್ಠಾನ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿದೆ. ಕಾಮಗಾರಿಗಳು ವಿವಿಧ ಹಂತದಲ್ಲಿರುತ್ತವೆ. ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

**ಸಂಖ್ಯೆ: ಟಿಓಆರ್ 161 ಟಿಡಿವಿ 2023**

(ಎಚ್.ಕೆ.ಪಾಟೀಲ)

ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

# ಪ್ರವಾಸೋದ್ಯಮ ಇಲಾಖೆ

## 72 ನೇ ನಿಯಮದ ಮೇರೆಗೆ ಶ್ರೀ ಹಣಮಂತ ಆರ್.ನಿರಾಣಿ, ಮಾನ್ಯ ವಿಧಾನಪರಿಷತ್ ಸದಸ್ಯರು ರವರು ಸಲ್ಲಿಸಿರುವ ಗಮನ ಸೆಳೆಯುವ ಸೂಚನೆಗೆ ಅನುಬಂಧ

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಯೋಜನೆಗಳ ವಿವರ | ಮಂಜೂರಾದ ವರ್ಷ | ಅಂದಾಜು ಮೊತ್ತ | ಈವರೆಗೂ ಬಿಡುಗಡೆ ಮಾಡಿರುವ ಅನುದಾನ | ಪ್ರಸ್ತುತ ಹಂತ |
|---|---|---|---|---|---|
| | ಬಾಗಲಕೋಟೆ ಜಿಲ್ಲೆ | | | | |
| 1 | ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲಲ್ಲೂಕಿನ ಬಾಗಲಕೋಟೆ-ಬಿಳಿಗಿರಿರಂಗನಬೆಟ್ಟ ರಾಹೆ-57 ರ ಕಿ.ಮೀ. 7.73 ರಿಮದ 29.38 ರ ವರೆಗೆ ಹಾಗೂ 34.10 ರಿಂದ 37.80 ರ ವರೆಗೆ ರಸ್ತೆ ಸುಧಾರಣೆ ಮಾಡುವುದು. | 2018-19 | 891.00 | 891.00 | ಕಾಮಗಾರಿ ಪೂರ್ಣ ಗೊಂಡಿದೆ. |
| 2 | ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ ನಂದವಾಡಗಿ ಗ್ರಾಮದ ಶ್ರೀ ಮಹಾಂತೇಶ್ವರ ಸಂಸ್ಥಾನ ಬೃಹನ್ಮಠದ ಬಳಿ ಯಾತ್ರಿನಿವಾಸ ನಿರ್ಮಾಣ. | 2018-19 | 50.00 | 50.00 | ಪ್ಲಿಂತ್ ಲೆವೆಲ್ ಕಾಮಗಾರಿ ಪ್ರಗತಿ ಯಲ್ಲಿದೆ. |
| 3 | ಬೀಳಗಿ ತಾಲ್ಲೂಕಿನ ಹೊನ್ನಿಹಾಳ ಪುನರ್‌ವಸತಿ ಕೇಂದ್ರದಲ್ಲಿರುವ ಸೋಮನಾಥ ದೇವಾಲಯ ಆವರಣದಲ್ಲಿ ಯಾತ್ರಿನಿವಾಸ ನಿರ್ಮಾಣ. | 2018-19 | 25.00 | 25.00 | ಕಾಮಗಾರಿ ಮುಕ್ತಾಯ ಹಂತದಲ್ಲಿದೆ. |
| 4 | ಬಾಗಲಕೋಟೆ ಜಿಲ್ಲೆಯ ಬಾದಾಮಿಯ ಬನಶಂಕರಿ ದೇವಸ್ಥಾನದ ಬಳಿ ಪ್ರವಾಸಿಗರ ಅನುಕೂಲಕ್ಕಾಗಿ ರೂ.18.32 ಕೋಟಿಗಳ ಅಂದಾಜು ವೆಚ್ಚದಲ್ಲಿ 75 ಕೊಠಡಿಗಳ 3-ಸ್ಟಾರ್ ಹೋಟೆಲ್ ನಿರ್ಮಾಣ | 2018-19 | 1832.00 | 400.00 | ಕಾಮಗಾರಿ ಪ್ರಗತಿಯಲ್ಲಿದೆ. |
| 5 | ತೇರದಾಳ ಶ್ರೀ ಅಲ್ಲಮಪ್ರಭು ದೇವಸ್ಥಾನದ ಬಳಿ ಯಾತ್ರಿನಿವಾಸ ಕುಡಿಯುವ ನೀರು, ರಸ್ತೆ ನಿರ್ಮಾಣ, ಗಾರ್ಡನ್‌ಗಳ ನವೀಕರಣ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ | 2019-20 | 15.00 | 5.00 | ರೂಫ್ ಲೆವಲ್‌ವರೆಗೆ ಪ್ರಗತಿ ಯಲ್ಲಿದೆ. |
| 6 | ಜಮಖಂಡಿ ತಾಲ್ಲೂಕು, ಕುಲಹಳ್ಳಿ ಗ್ರಾಮದ ಶ್ರೀ ಶಿದಗಿರೇಶ್ವರ ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ, ಕುಡಿಯುವ ನೀರು, ರಸ್ತೆ ನಿರ್ಮಾಣ, ಗಾರ್ಡನ್‌ಗಳ ನವೀಕರಣ ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿ | 2019-20 | 25.00 | 5.00 | ಕಾಮಗಾರಿ ಪ್ರಗತಿ ಯಲ್ಲಿದೆ. |

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಯೋಜನೆಗಳ ವಿವರ | ಮಂಜೂರಾದ ವರ್ಷ | ಅಂದಾಜು ಮೊತ್ತ | ಈವರೆಗೂ ಬಿಡುಗಡೆ ಮಾಡಿರುವ ಅನುದಾನ | ಪ್ರಸ್ತುತ ಹಂತ |
|---|---|---|---|---|---|
| 7 | ಬನಹಟ್ಟಿ ನಗರದ ಹಳೆಯಲ್ಲಮ್ಮ ದೇವಸ್ಥಾನದ ಆವರಣದಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾಮಗಾರಿಗಳಲ್ಲಿ ಚೈನ್‌ಲಿಂಕ್, ಆಸನಗಳ ವ್ಯವಸ್ಥೆ ಹಾಗೂ ವಾಹನ ನಿಲುಗಡೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸುವ ಕಾಮಗಾರಿ (ಬನಹಟ್ಟಿ ನಗರದ ಹಳೆಯಲ್ಲಮ್ಮ ದೇವಸ್ಥಾನದ ಬಳಿ ಯಾತ್ರಿನಿವಾಸ ಕುಡಿಯುವ ನೀರು, ರಸ್ತೆ ನಿರ್ಮಾಣ, ಗಾರ್ಡನ್‌ಗಳ ನವೀಕರಣ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ | 2019-20 | 20.00 | 5.00 | ಪ್ಲಾಸ್ಟಿಂಗ್ ಕೆಲಸ ಪೂರ್ಣಗೊಂಡಿದೆ. |
| 8 | ಜಮಖಂಡಿ ತಾಲ್ಲೂಕು ಮೈಗೂರು ಗ್ರಾಮದ ಶ್ರೀ ಶಿವಾನಂದ ಮಠದ ಬಳಿ ಯಾತ್ರಿನಿವಾಸ ಹಾಗೂ ಮೂಲಭೂತ ಸೌಕರ್ಯ ಅಭಿವೃದ್ಧಿ. | 2019-20 | 75.00 | 25.00 | ಪ್ಲಾಸ್ಟರಿಂಗ್ ಕಾಮಗಾರಿ ಪೂರ್ಣಗೊಂಡಿದೆ. |
| 9 | ಬಾಗಲಕೋಟೆ ಜಿಲ್ಲೆ, ಹುನಗುಂದ ತಾಲ್ಲೂಕು, ಪಾಪನಾಳ ಗ್ರಾಮ ಶ್ರೀ ಪಾಪೇಶ್ವರ ದೇವಸ್ಥಾನದ ಹತ್ತಿರ ಯಾತ್ರಿನಿವಾಸ | 2019-20 | 100.00 | 45.00 | ಪ್ಲಾಸ್ಟರಿಂಗ್ ಕಾಮಗಾರಿ ಪ್ರಗತಿ ಯಲ್ಲಿದೆ. |
| 10 | ತೇರದಾಳ ಶ್ರೀ ಅಲ್ಲಮಪ್ರಭು ದೇವಸ್ಥಾನದ ಬಳಿ ಯಾತ್ರಿನಿವಾಸ ಕುಡಿಯುವ ನೀರು, ರಸ್ತೆ ನಿರ್ಮಾಣ, ಗಾರ್ಡನ್‌ಗಳ ನವೀಕರಣ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ | 2019-20 | 25.00 | 5.00 | ರೂಫ್ ಲೆವಲ್‌ವರೆಗೆ ಪ್ರಗತಿ ಯಲ್ಲಿದೆ. |
| 11 | ಬಾಗಲಕೋಟೆ ಜಿಲ್ಲೆಯ ಪಟ್ಟದಕಲ್ಲಿನಲ್ಲಿರುವ ಇಲಾಖೆಯ 24 ಎಕರೆ ಜಮೀನಿನಲ್ಲಿ ಟೂರಿಸಂ ಪ್ಲಾಜಾ ನಿರ್ಮಾಣ | 2019-20 | 2925.00 | 1462.00 | ಕಾಮಗಾರಿ ಪ್ರಗತಿಯಲ್ಲಿದೆ |
| 12 | ಬಾಗಲಕೋಟೆ ಜಿಲ್ಲೆಯ ಬಾದಾಮಿಯ ಗುಹಾಂತರ ದೇವಾಲಯ ಪ್ರದೇಶದಲ್ಲಿ ಪ್ರವಾಸಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ | 2019-20 | 500.00 | 0.00 | ಪ್ರಾರಂಭಿಸಬೇಕಿದೆ |

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಯೋಜನೆಗಳ ವಿವರ | ಮಂಜೂರಾದ ವರ್ಷ | ಅಂದಾಜು ಮೊತ್ತ | ಈವರೆಗೂ ಬಿಡುಗಡೆ ಮಾಡಿರುವ ಅನುದಾನ | ಪ್ರಸ್ತುತ ಹಂತ |
|---|---|---|---|---|---|
| 13 | ಬಾದಾಮಿಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದ ಪೂರ್ವ ಭಾಗದಲ್ಲಿ ಖಾಲಿ ಇರುವ 9 ಎಕರೆ 8 ಗುಂಟೆ ಜಮೀನನ್ನು ಪ್ರತಿ ಚದರ ಅಡಿಗೆ ರೂ.100/- ಗಳಂತೆ 10 ವರ್ಷಗಳ ಅವಧಿಗೆ ಲೀಸ್-ಕಂ-ಸೇಲ್ ಆಧಾರದ ಮೇಲೆ ಖರೀದಿಸುವ ಬಗ್ಗೆ | 2020-21 | 400.75 | 400.75 | ಜಮೀನು ಹಸ್ತಾಂತರಿಸಬೇಕಿದೆ |
| 14 | ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕು, ಯಡಹಳ್ಳಿ, ಇಂಗಳಗಿಯ ಶ್ರೀ ಅಡವೇಶ್ವರ ಮಠ (ವ್ಹೀ ಅಡವಿ ಮಠ) ಇಲ್ಲಿ ಯಾತ್ರಿನಿವಾಸ ನಿರ್ಮಾಣ ಕಾಮಗಾರಿ | 2022-23 | 300.00 | 0.00 | ಪ್ರಾರಂಭಿಸಬೇಕಿದೆ |
| 15 | ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಕೂಡಲಸಂಗಮ ಅಭಿನವ ಜಾತವೇದ ಶಿವಾಚಾರ್ಯ ಸಾರಂಗ ಮಠದ ಹತ್ತಿರ ಯಾತ್ರಿನಿವಾಸ, ಕುಡಿಯುವ ನೀರು ಹಾಗೂ ಶೌಚಾಲಯ ಕಟ್ಟಡ ನಿರ್ಮಾಣ ಕಾಮಗಾರಿ | 2022-23 | 100.00 | 0.00 | ಪ್ರಾರಂಭಿಸ ಬೇಕಿದೆ. |
| 16 | ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಸುಕ್ಷೇತ್ರ ಹಂಚಿನಾಳ ಗ್ರಾಮದ ಶ್ರೀ ಸುವರ್ಣಖಂಡಿ ಸಂಗಮೇಶ್ವರ, ದೊಡ್ಡ ಬಸವೇಶ್ವರ ದೇವಸ್ಥಾನದ ಬಳಿ ಯಾತ್ರಿನಿವಾಸ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಕಾಮಗಾರಿಗಳು | 2022-23 | 50.00 | 0.00 | ಪ್ರಾರಂಭಿಸಬೇಕಿದೆ. |
| 17 | ಬಾಗಲಕೋಟೆ ಜಿಲ್ಲೆಯ ಬಾದಾಮಿ ಪಟ್ಟಣದ ಬನಶಂಕರಮ್ಮ ದೇವಸ್ಥಾನದ ಮುಂದಿರುವ ಹರಿದ್ರಾನಾಥ ಪುಷ್ಕರಣಿಯನ್ನು (ಹೊಂಡ) ಸ್ವಚ್ಛಗೊಳಿಸುವ ಕಾಮಗಾರಿ. | 2022-23 | 100.00 | 0.00 | ಪ್ರಾರಂಭಿಸಬೇಕಿದೆ. |
| | ಒಟ್ಟು | | **7433.75** | **3318.75** | |

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಯೋಜನೆಗಳ ವಿವರ | ಮಂಜೂರಾದ ವರ್ಷ | ಅಂದಾಜು ಮೊತ್ತ | ಈವರೆಗೂ ಬಿಡುಗಡೆ ಮಾಡಿರುವ ಅನುದಾನ | ಪ್ರಸ್ತುತ ಹಂತ |
|---|---|---|---|---|---|
| | | | | | |
| | **ವಿಜಯಪುರ ಜಿಲ್ಲೆ** | | | | |
| 1 | ವಿಜಯಪೂರ ಜಿಲ್ಲೆ ಬಸವನಬಾಗೇವಾಡಿ ಡಿಂಡವಾರ ಗ್ರಾಮ ಶ್ರೀ ಶ್ರೀ ಮುರುಗರಾಜೇಂದ್ರ ಶಿವಾಚಾರ್ಯ ಮತ್ತು ಶ್ರೀ ಶ್ರೀ ರುದ್ರಮುನಿ ಶಿವಾಚಾರ್ಯ ಮಠ ದಿಂಡವಾರ ಹತ್ತಿರ ಮೂಲಭೂತ ಸೌಕರ್ಯ. | 2018-19 | 50.00 | 25.00 | ಕಾಮಗಾರಿ ಪ್ರಾರಂಭಿಸಬೇಕಿದೆ. |
| 2 | ಸಿಂದಗಿ ಬೈಪಾಸ ದಿಂದ ಗೋಲಗುಮ್ಮಟ ವರೆಗೆ ರಸ್ತೆ ಸುಧಾರಣೆ ಮಾಡುವುದು. | 2018-19 | 100.00 | 100.00 | ಕಾಮಗಾರಿ ಪೂರ್ಣಗೊಂಡಿದೆ. |
| 3 | ಮುದ್ದೇಬಿಹಾಳ ತಾಲ್ಲೂಕು ಕೋಳೂರು ಗ್ರಾಮದ ಶ್ರೀ ಕೊಟ್ಟೂರು ಬಸವೇಶ್ವರ ದೇವಸ್ಥಾನ ಹತ್ತಿರ ಸ್ನಾನಗೃಹ, ಶೌಚಾಲಯ ನಿರ್ಮಾಣ. | 2018-19 | 25.00 | 25.00 | ಕಾಮಗಾರಿ ಪ್ರಾರಂಭಿಸಬೇಕಿದೆ. |
| 4 | ವಿಜಯಪುರ ಜಿಲ್ಲೆ, ಸಿಂಧಗಿ ಪಟ್ಟಣದಲ್ಲಿರುವ ಶ್ರೀ ಸಂಗಮೇಶ್ವರ ಕೆರೆಯಲ್ಲಿ ಉದ್ಯಾನವನ ನಿರ್ಮಾಣ, ಮಕ್ಕಳ ಆಟದ ಸೌಲಭ್ಯ, ಏರಿಯ ಮೇಲೆ ಪಾತ್‌ವೇ, ರೈಲಿಂಗ್ಸ್, ಸಂಪರ್ಕ ರಸ್ತೆ, ಪರಗೋಲ, ಗೆಜೆಬೋ ನಿರ್ಮಾಣ. | 2018-19 | 100.00 | 100.00 | ಕಾಮಗಾರಿ ಪೂರ್ಣಗೊಂಡಿದೆ. |
| 5 | ವಿಜಯಪುರ ಜಿಲ್ಲೆ, ವಿಜಯಪುರ ತಾಲ್ಲೂಕಿನ ಬೂತನಾಳ ಗ್ರಾಮದ ಸರ್ವೆ ನಂ.130/*/ಎ ರಲ್ಲಿರುವ ಪ್ರವಾಸೋದ್ಯಮ ಇಲಾಖೆಯ 5.00 ಎಕರೆ ಜಮೀನಿನಲ್ಲಿ 59 ಕೊಠಡಿಗಳ 3-ಸ್ಟಾರ್ ಹೋಟೆಲ್ ನಿರ್ಮಾಣ | 2018-19 | 1674.00 | 400.00 | ಕಾಮಗಾರಿ ಪ್ರಾರಂಭಿಸಬೇಕಿದೆ. |
| 6 | ಬಸನವಬಾಗೇವಾಡಿ ತಾಲ್ಲೂಕಿನ ಅಕಲವಾಡಿ ಗ್ರಾಮದಲ್ಲಿ ಯಾತ್ರಿನಿವಾಸ ನಿರ್ಮಾಣ. | 2019-20 | 25.00 | 10.00 | ಬೇಸ್ಮೆಂಟ್ ಕೆಲಸ ಪ್ರಗತಿಯಲ್ಲಿದೆ. |
| 7 | ಇಂಡಿ ತಾಲ್ಲೂಕಿನ ಅಗರಖೇಡ ಗ್ರಾಮದ ಶ್ರೀ ಪ್ರಭುಲಿಂಗೇಶ್ವರ ವಿರಕ್ತ ಮಠದ ಬಳಿ ಯಾತ್ರಿನಿವಾಸ ನಿರ್ಮಾಣ (ಇಂಡಿ ತಾಲ್ಲೂಕು ಅರ್ಥಗಾ ಗ್ರಾಮ ಶ್ರೀ ಸಿದ್ದೇಶ್ವರ ಸ್ವಾಮೀಜಿ ಆಶ್ರಮದ ಬಳಿ ಯಾತ್ರಿನಿವಾಸ ನಿರ್ಮಾಣ ಬದಲಾಗಿ) | 2019-20 | 25.00 | 25.00 | ಕಾಮಗಾರಿ ಪೂರ್ಣಗೊಂಡಿದೆ. |

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಯೋಜನೆಗಳ ವಿವರ | ಮಂಜೂರಾದ ವರ್ಷ | ಅಂದಾಜು ಮೊತ್ತ | ಈವರೆಗೂ ಬಿಡುಗಡೆ ಮಾಡಿರುವ ಅನುದಾನ | ಪ್ರಸ್ತುತ ಹಂತ |
|---|---|---|---|---|---|
| 8 | ವಿಜಯಪುರ ಜಿಲ್ಲೆ, ಬಬಲೇಶ್ವರ ಕ್ಷೇತ್ರದ ಬಿಜ್ಜರಗಿ ಗ್ರಾಮದ ಶ್ರೀ ಬುದ್ಧವಿಹಾರ ಬುದ್ಧನಗರ ಹತ್ತಿರ ಯಾತ್ರಿನಿವಾಸ ನಿರ್ಮಾಣ. | 2019-20 | 50.00 | 50.00 | ಕಾಮಗಾರಿ ಪೂರ್ಣಗೊಂಡಿದೆ. |
| 9 | ವಿಜಯಪುರ ಜಿಲ್ಲೆ, ಮುದ್ದೇಬಿಹಾಳ ವಿಧಾನಸಭಾ ಕ್ಷೇತ್ರ ಸೂರು ಗ್ರಾಮದ ಶ್ರೀ ರೇವಣಸಿದ್ದೇಶ್ವರ ಗುರುಮಠ ಹತ್ತಿರ ಯಾತ್ರಿನಿವಾಸ ನಿರ್ಮಾಣ. | 2019-20 | 100.00 | 60.00 | ಪೇಂಟಿಂಗ್ ಕೆಲಸ ಪ್ರಾರಂಭಿಸಬೇಕಿದೆ. |
| 10 | ವಿಜಯಪುರ ಜಿಲ್ಲೆಯ ಆಲಮಟ್ಟಿ ಪ್ರದೇಶವನ್ನು ಸಮಗ್ರ ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸುವ ಯೋಜನೆ | 2021-22 | 369.82 | 148.19 | ಕಾಮಗಾರಿ ಪ್ರಾರಂಭಿಸಬೇಕಿದೆ. |
| 11 | ಆದಾಲತ್ ಮಹಲ್ (ಅಂಬೇಡ್ಕರ್ ಸರ್ಕಲ್) ದಿಂದ ಕರಿಮದ್ದಿನ ಮಸೀದಿ ಜಂಕ್ಷನ್ ಅರ್ಕಿಲ್ಲಾ ಬ್ಲಾಕ್ ಕೋಟೆಗೋಡೆವರೆಗಿನ ರಸ್ತೆಯ ಬಲಬದಿಯ ಫುಟಪಾತ್ (ಪೇವರ್ ವರ್ಕ್ಸ್), ರಸ್ತೆ ವಿಭಜಕದ ಪೇಂಟಿಂಗ್ ಹಾಗೂ ಸೈನ್ ಬೋರ್ಡ್ಸ್ ಮತ್ತು ಕೋಟೆ ಗೋಡೆ ಹಾಗೂ ದರಬಾರ್ ಹಾಲ್ ಸ್ಮಾರಕದ ಹಿಂದಿನ (ಲಲಿತ್ ಮಹಲ್ ವರೆಗೆ) ಡಾಂಬರ್ ರಸ್ತೆ ಮತ್ತು ಆದಾಲತ್ ಮಹಲ್ ಮುಂದಿನ ಬಾಕಿ ಉಳಿದ ರಸ್ತೆ ಹಾಗೂ ಸೌಂದರೀಕರಣ | 2021-22 | 60.00 | 60.00 | ಕಾಮಗಾರಿ ಪೂರ್ಣಗೊಂಡಿದೆ. |
| 12 | ಗೋಳಗುಮ್ಮಟ ಸ್ಮಾರಕದ (ರೈಲ್ವೆ ಬ್ರಿಜ್ ನಿಂದ-ರೈಲ್ವೆ ಸ್ಟೇಷನ್ ಸರ್ಕಲ್) ಕೋಟೆಗೋಡೆ-ಕಂದಕದಿಂದ ಸ್ಮಾರಕದದಗುಂಟ ಪೂರ್ವದ ರಸ್ತೆ ಸ್ಟೇಷನ್ ಹಿಂದಿನ ರಸ್ತೆ ಸೇರುವ ರಸ್ತೆ ದಕ್ಷಿಣ ಭಾಗದ ರಸ್ತೆ ಹಾಗೂ ಮಳೆ ನೀರು ಚರಂಡಿ ನಿರ್ಮಾಣ ಹಾಗೂ ಸೌಂದರೀಕರಣ ಕಾಮಗಾರಿ | 2021-22 | 140.00 | 140.00 | ಕಾಮಗಾರಿ ಪ್ರಾರಂಭಿಸಬೇಕಿದೆ. |
| 13 | ವಿಜಯಪುರ ನಗರದ ಆನಂದ ಮಹಲ್ ಪಾರಂಪರಿಕ ಕಟ್ಟಡದಲ್ಲಿ ವಿಜಯಪುರ ಪ್ರವಾಸೋದ್ಯಮ ವ್ಯಾಖ್ಯಾನ ಕೇಂದ್ರವನ್ನು ಸ್ಥಾಪಿಸಲು ಕಟ್ಟಡ ಸಂರಕ್ಷಣೆ ಹಾಗೂ ಇತರೆ ಕಾಮಗಾರಿ | 2019-20 | 500.00 | 500.00 | ಅಂತಿಮ ಹಂತದಲ್ಲಿದೆ |

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಯೋಜನೆಗಳ ವಿವರ | ಮಂಜೂರಾದ ವರ್ಷ | ಅಂದಾಜು ಮೊತ್ತ | ಈವರೆಗೂ ಬಿಡುಗಡೆ ಮಾಡಿರುವ ಅನುದಾನ | ಪ್ರಸ್ತುತ ಹಂತ |
|---|---|---|---|---|---|
| 14 | ವಿಜಯಪುರ ನಗರದಲ್ಲಿರುವ ಪುರಾತನ ನೀರು ಸರಬರಾಜು ಯೋಜನೆ (ಕರೇಜ್)ಯನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸುವುದು ಹಾಗೂ ಇತರೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು. | 2019-20 | 1000.00 | 0.00 | ಪ್ರಾರಂಭಿಸ ಬೇಕಿದೆ. |
| 15 | ವಿಜಯಪುರ ನಗರದ ಹಕೀಮ ಚೌಕದಿಂದ ಗೋಲಗುಂಬಜ್‌ವರೆಗೆ ರಸ್ತೆ ಸುಧಾರಣೆ | 2022-23 | 100.00 | 0.00 | ಪ್ರಾರಂಭಿಸಬೇಕಿದೆ. |
| 16 | ವಿಜಯಪುರ ನಗರದ ವಿಶ್ವ ಪ್ರಸಿದ್ಧ ಗೋಲಗುಂಬಜ್‌ದಿಂದ ರೈಲ್ವೇ ಸ್ಟೇಷನ್ ಮೂಲಕ ರೈಲ್ವೇ ಸ್ಟೇಷನ್ ಹಿಂದಿನ ರಸ್ತೆವರೆಗೆ ರಸ್ತೆ ಅಭಿವೃದ್ಧಿ ಪಡಿಸುವುದು ಹಾಗೂ ಬೀದಿದೀಪ ಅಳವಡಿಸುವುದು. | 2022-23 | 100.00 | 0.00 | ಪ್ರಾರಂಭಿಸಬೇಕಿದೆ. |
| 17 | ವಿಜಯಪುರ ನಗರದ ಶಾಂತಿನಿಕೇತನ ಕಾಲನಿಯ ಪ್ರವಾಸಿ ತಾಣವಾದ ಕೋಟೆ ಗೋಡೆ ಮೇಲಿನ ಲಾಂಡಕ್ ತೋಪಿನ ಸಂಪರ್ಕ ಕಲ್ಪಿಸುವ ರಸ್ತೆಗಳ ಅಭಿವೃದ್ಧಿಪಡಿಸುವುದು | 2022-23 | 100.00 | 0.00 | ಪ್ರಾರಂಭಿಸಬೇಕಿದೆ. |
| 18 | ವಿಜಯಪುರ ನಗರದ 1008 ಸಹಸ್ರಫಣಿ ಪಾರ್ಶ್ವನಾಥ ಜೈನ ವೃತ್ತದಿಂದ ಪುರಾತನ ಜೈನ್ ಮಂದಿನ ಮೂಲಕ ಯತ್ನಾಳ ಕ್ರಾಸ್ ವರೆಗೆ ರಸ್ತೆ ಬದಿ ದೀಪಾಲಂಕಾರ (ಬೀದಿ ದೀಪ) ಅಳವಡಿಸುವುದು | 2022-23 | 100.00 | 0.00 | ಪ್ರಾರಂಭಿಸಬೇಕಿದೆ. |
| 19 | ವಿಜಯಪುರ ನಗರದ ಪುರಾತನ ಪ್ರವಾಸಿ ತಾಣ ಅಡವಿಶಂಕರಲಿಂಗ ದೇವಸ್ಥಾನದ ಹತ್ತಿರ ಪ್ರವಾಸಿಗರಿಗೆ ಯಾತ್ರಾ ನಿವಾಸ ನಿರ್ಮಾಣ | 2022-23 | 100.00 | 0.00 | ಪ್ರಾರಂಭಿಸಬೇಕಿದೆ. |

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಯೋಜನೆಗಳ ವಿವರ | ಮಂಜೂರಾದ ವರ್ಷ | ಅಂದಾಜು ಮೊತ್ತ | ಈವರೆಗೂ ಬಿಡುಗಡೆ ಮಾಡಿರುವ ಅನುದಾನ | ಪ್ರಸ್ತುತ ಹಂತ |
|---|---|---|---|---|---|
| 20 | ಮುದ್ದೇಬಿಹಾಳ ತಾಲ್ಲೂಕು, ಕೋಲೂರು ಗ್ರಾಮದ ಶ್ರೀ ಕೊಟ್ಟೂರು ಬಸವೇಶ್ವರ ದೇವಸ್ಥಾನದ ಬಳಿ ಯಾತ್ರಿನಿವಾಸ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿ | 2022-23 | 150.00 | 0.00 | ಪ್ರಾರಂಭಿಸಬೇಕಿದೆ. |
| 21 | ವಿಜಯಪುರ ಜಿಲ್ಲೆಯ ದೇವರಹಿಪ್ಪರಗಿ ತಾಲ್ಲೂಕಿನ ಶ್ರೀ ಮಡಿವಾಳ ಮಾಚಿದೇವರ ಎಲ್ಲಾ ಕುರುಹುಗಳನ್ನು ಅಭಿವೃದ್ಧಿಗೊಳಿಸಿ ಸಾರ್ವಜನಿಕ ಯಾತ್ರಾ ಸ್ಥಳಗಳನ್ನಾಗಿಸುವ ಕಾಮಗಾರಿಗಳ ಕುರಿತು (2022-23ನೇ ಸಾಲಿನ ಆಯವ್ಯಯ ಘೋಷಣೆ) | 2022-23 | 100.00 | 33.00 | ಪ್ರಾರಂಭಿಸಬೇಕಿದೆ. |
| | | ಒಟ್ಟು | 4968.82 | 1676.19 | |